ಶ್ರೀ ಸಿ.ಎನ್. ಬಾಲಕೃಷ್ಣ:– ಮಾನ್ಯ ಅಧ್ಯಕ್ಷರೆ, 2014–15ನೇ ಸಾಲಿನಲ್ಲಿ ರಾಜ್ಯದಲ್ಲಿ 100 ಪಶು ಚಿಕಿತ್ಸಾಲಯಗಳನ್ನು ತೆರೆಯಲು ಹಾಗೂ 100 ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದೆ ಎಂಬುದನ್ನು ಮಾನ್ಯ ಮಂತ್ರಿಗಳು ಉತ್ತರವಾಗಿ ತಿಳಿಸಿದ್ದಾರೆ. ಆದರೆ, ಇಡೀ ರಾಜ್ಯದಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿ ಬೇಡಿಕೆ ಇರುವುದರಿಂದ ಹೊಸ ಪಶು ಚಿಕಿತ್ಸಾಲಯಗಳನ್ನು 100 ಕ್ಕಿಂತ 200 ಹೆಚ್ಚುವರಿ ಮಾಡಿದರೆ ಎಲ್ಲಾ ತಾಲ್ಲೂಕುಗಳಲ್ಲಿ ಬೇಡಿಕೆ ಇರುವುದರಿಂದ ಅವಕಾಶವಾಗುತ್ತದೆ. ಮಾನ್ಯ ಸಚಿವರು ಈ ಸಾಲಿನಲ್ಲಿ ಅವಕಾಶ ಮಾಡಿಕೊಡಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಈಗಾಗಲೇ ಅನೇಕ ಸಂದರ್ಭದಲ್ಲಿ ನಾನು ಉತ್ತರ ಕೊಟ್ಟಿದ್ದೇನೆ. ಈಗಿರುವ 100 ಆಸ್ಪತ್ರೆಗಳಿಗಿಂತ ಜಾಸ್ತಿ ಮಾಡಬೇಕು ಮತ್ತು 100 ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವುದನ್ನು ಹೆಚ್ಚು ಮಾಡಬೇಕೆಂಬ ಮನವಿಯನ್ನು ಈಗಾಗಲೇ ಮುಖ್ಯಮಂತ್ರಿಗಳೊಡನೆ ಚರ್ಚೆಸಿದ್ದೇನೆ. ಹೆಚ್ಚು ಮಾಡಬೇಕೆಂದು ಮನವಿಯನ್ನು ಸಹ ಇಟ್ಟಿದ್ದೇನೆ. ಅದಕ್ಕೆ ಆದಷ್ಟು ಪ್ರಯತ್ನ ಮಾಡಿ ಹೆಚ್ಚು ಆಸ್ಪತ್ರೆಗಳನ್ನು ಕೊಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು:– ಈಗ ಅರವಿಂದ ಚಂದ್ರಕಾಂತ ಬೆಲ್ಲದ್ ರವರು.

3) ವಿಷಯ:– ಹುಬ್ಬಳ್ಳಿ ನಗರದ ಉಣಕಲ್ ಕೆರೆಯು ಪಾಲಿಕೆ ಮತ್ತು ಜಿಲ್ಲಾಡಳಿತದ ನಿರ್ಲಕ್ಷ್ಯದಿಂದ ಕಳೆಗುಂದುತ್ತಿರುವುದರಿಂದ ಕೆರೆಯ ಸಂರಕ್ಷಣೆ ಬಗ್ಗೆ.

ಶ್ರೀ ಅರವಿಂದ ಚಂದ್ರಕಾಂತ ಬೆಲ್ಲದ್ (ಹುಬ್ಬಳ್ಳಿ–ಧಾರವಾಡ (ಪಶ್ಚಿಮ)):– ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ ನಗರದ ಉಣಕಲ್ ಕೆರೆಯು ಪಾಲಿಕೆ ಮತ್ತು ಜಿಲ್ಲಾಡಳಿತದ ನಿರ್ಲಕ್ಷ್ಯದಿಂದ ಕಳೆಗುಂದುತ್ತಿರುವುದರಿಂದ ಕೆರೆಯ ಸಂರಕ್ಷಣೆ ಬಗ್ಗೆ ಮಾನ್ಯ ನಗಾರಾಭಿವೃದ್ಧಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ವಿನಯ್ ಕುಮಾರ್ ಸೊರಕೆ (ನಗರಾಭಿವೃದ್ಧಿ ಸಚಿವರು):– ಮಾನ್ಯ ಅಧ್ಯಕ್ಷರೆ,

ಹುಬ್ಬಳ್ಳಿ ನಗರದ ಉಣಕಲ್ ಕೆರೆಯ ಒಟ್ಟು ವಿಸ್ತೀರ್ಣವು 218 ಎಕರೆಗಳಷ್ಟಿದ್ದು, ಆಳವು 12 ಮೀಟರ್‌ವರೆಗೆ ಇರುವುದಲ್ಲದೇ ಅತೀ ವಿಶಾಲವಾದ ಕೆರೆಯಿದ್ದು, ಕೆರೆಗೆ ಸುತ್ತಮುತ್ತಲಿನ ಪ್ರದೇಶದಿಂದ ಹರಿವು ಬರವು ನೀರಿನಿಂದ ಮಲಿನವಾಗಿರುತ್ತದೆ. ಅದಲ್ಲದೆ ನಿಂತ ನೀರು ಹೆಚ್ಚಿನ ಪ್ರಮಾಣದಲ್ಲಿ ಮಲಿನವಾಗಿರುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಕಳೆ (ವೀಡ್ಸ್) ಇರುತ್ತದೆ.

ಉಣಕಲ್ ಕೆರೆಯನ್ನು ಸ್ವಚ್ಛಮಾಡಲು ಹುಬ್ಬಳ್ಳಿ–ಧಾರವಾಡ ಮಹಾನಗರಪಾಲಿಕೆಯಿಂದ 20 ಜನ ಕಾರ್ಮಿಕರನ್ನು ದಿನಃಪ್ರತಿ ನಿಯೋಜಿಸಿದ್ದು ದೀರ್ಘಾವಧಿ ಕ್ರಮವಾಗಿ ಉಣಕಲ್ ಕೆರೆಯ ಮಾಲಿನ್ಯ ನಿಯಂತ್ರಣ ಮಾಡುವ ಸಲುವಾಗಿ ಜೈವಿಕ ಮಾಲಿನ್ಯ ನಿಯಂತ್ರಣ ಮಾಡುವ ಕೀಟಗಳನ್ನು ಕೆರೆಯಲ್ಲಿ ಈಗಾಗಲೇ ಬಿಡಲಾಗಿದೆ. ಕೀಟಗಳು ಅಪ್ಪುಹುಲ್ಲು ಹಾಗೂ ಕಳೆಯನ್ನು ಸೇವನೆ ಮಾಡಿ ಕೆರೆಯ ಮಾಲಿನ್ಯವನ್ನು ನಿಯಂತ್ರಣ ಮಾಡಲು ಸಹಾಯಕವಾಗಿದೆ. ಹೀಗೆ ಮಾಲಿನ್ಯ ನಿಯಂತ್ರಣ ಮಾಡಲು ಸುಮಾರು ಒಂದು ವರ್ಷ ಕಾಲಾವಧಿ ಬೇಕಾಗುತ್ತದೆ.

ನಗರದ ಮಲಿನ ನೀರು ಕೆರೆಗೆ ಸೇರದಂತೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ರವರು ನವೀನ ಮಾದರಿಯ ಎಸ್.ಟಿ.ಪಿ ನಿರ್ಮಿಸಲು ಮಾಡಲು ಯೋಜನೆ ತಯಾರಿಸಲಾಗಿದ್ದು, ಮುಂದಿನ ಕ್ರಮ ವಹಿಸಲಾಗುವುದು.

ಶ್ರೀ ಅರವಿಂದ ಚಂದ್ರಕಾಂತ ಬೆಲ್ಲದ್:– ಮಾನ್ಯ ಅಧ್ಯಕ್ಷರೆ, ನಮ್ಮ ಹುಬ್ಬಳ್ಳಿ–ಧಾರವಾಡದ ಪ್ರವಾಸಿ ಸ್ಥಳ ಅತ್ಯಂತ ಪ್ರಮುಖ ಕೆರೆ ಎಂದರೆ ಉಣಕಲ್ ಕೆರೆ. ಅದರಲ್ಲಿ ಹುಬ್ಬಳ್ಳಿ–ಧಾರವಾಡದ ಎಲ್ಲಾ ಹೊಲಸು ಬಂದು ಸೇರುತ್ತಿದೆ. ಕೆರೆಯಲ್ಲಿ ಪೂರ್ತಿ ಅಕರ್ನಿಯಾ ಎಂದು ಕಳೆ ಬೆಳೆದು ಪೂರ್ತಿ ಕೆರೆ ಕೆಟ್ಟು ಹೋಗಿದೆ. ಕೊಳಚೆ ನೀರಿನಿಂದಾಗಿ ಸುತ್ತಮುತ್ತ ಓಡಾಡುವುದು

ಕಷ್ಟವಾಗಿದೆ. ಅದೇ ರೀತಿಯ ಪರಿಸ್ಥಿತಿ ನವಲೂರು ಕೆರೆಗೆ ಕೂಡ ಆಗಿದೆ. ಇವೆರಡು ಕೆರೆಗಳನ್ನು ಯಾವಾಗ ಸುಧಾರಿಸುತ್ತೀರಿ? ಅದರ ಬಗ್ಗೆ ಏನು plan ಇದೆ ಎಂಬುದನ್ನು ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):– ನಾನು ಇಲ್ಲಿ ಸ್ವಲ್ಪ add ಮಾಡುತ್ತೇನೆ. ಇಲ್ಲಿ ಸರ್ಕಾರದ ಗಮನಕ್ಕೆ ತರುವಂತಹುದು. ಉಣಕಲ್ ಕೆರೆ ಬಹಳ ಹಳೆಯ ಕೆರೆ. ಈ ಕೆರೆಯಲ್ಲಿ ಅಂತರ್ ಗಂಗೆ, ಅಕರ್ನಿಯಾ ಮತ್ತು ಅಪ್ಪಹುಲ್ಲು ಎಂದು ಬೆಳೆಯುತ್ತಿದೆ. ಇದು complete spread ಆಗುತ್ತಿದೆ. ನೀವು ನೋಡಿದರೆ ರಸ್ತೆ ಮೇಲೆ ಹೋಗುವ ಹಾಗೆ ಕಾಣುತ್ತದೆ. ಆದರೆ ಬಹಳ ಬೇಗ ಕೆರೆಗೆ ಹುಬ್ಬುತ್ತಿದೆ. ಇದಕ್ಕೆ ಜಿಲ್ಲಾಡಳಿತವಾಗಲಿ, ಕಮಿಷನರ್‌ರವರಗಾಗಲಿ ಅದರ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳುತ್ತಿಲ್ಲ. ಇನ್ನು ಯು.ಜಿ.ಡಿ. ನೀರು ಹೋಗುತ್ತಿದೆ. ಅದನ್ನು ಸರಿ ಮಾಡಬೇಕು, ಅದು long period ಇದೆ. ಆದರೆ ಇದಕ್ಕೆ ತಕ್ಷಣವೇ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಇಡೀ ಕೆರೆಗೆ ಹಬ್ಬುತ್ತಿರುವುದರಿಂದ ನೀರು ಕಲುಷಿತವಾಗುತ್ತಿದೆ. ಹೊರಗೆ ರಸ್ತೆ ಮೇಲೆ ನಿಂತರೂ ಕಾಣುತ್ತದೆ. ಇಡೀ ಕೆರೆ ತುಂಬುತ್ತಿದ್ದು, ಇದರಿಂದ ನೀರು ಕಲುಷಿತವಾಗುತ್ತಿದೆ. ಅದನ್ನು ತೆಗೆಯಲು ತಕ್ಷಣ ಕ್ರಮ ತೆಗೆದುಕೊಳ್ಳಿ.

ಶ್ರೀ ಅರವಿಂದ ಚಂದ್ರಕಾಂತ ಬೆಲ್ಲದ್:– ನವಲೂರು ಕೆರೆ ಬಗ್ಗೆ ಏನು ಮಾಡುತ್ತಿದ್ದೀರಿ?

ಅಧ್ಯಕ್ಷರು:– ನವಲೂರು ಕೆರೆಯ ಬಗ್ಗೆ ನೀವು ಕೇಳಿಲ್ಲ ನೀವು. ಉಣಕಲ್ ಕೆರೆಯ ಬಗ್ಗೆ ಮಾತ್ರ ಕೇಳಿರುವುದು.

ಶ್ರೀ ಅರವಿಂದ ಚಂದ್ರಕಾಂತ ಬೆಲ್ಲದ್:– ನವಲೂರು ಕೆರೆಯ ಬಗ್ಗೆಯೂ ಕೇಳಿದ್ದೇನೆ ಪ್ರಶ್ನೆಯಲ್ಲಿದೆ.

ಅಧ್ಯಕ್ಷರು:– ಆಯಿತು ಬಿಡಿ, ನೋಡುತ್ತಾರೆ. ಈಗ ಬಿ.ಬಿ. ನಿಂಗಯ್ಯ ರವರು.

4) **ವಿಷಯ:–** ಮೂಡಿಗೆರೆ ತಾಲ್ಲೂಕಿನ ಕಳಸಾ ಹೋಬಳಿಯಲ್ಲಿ ಭದ್ರಾ ನದಿಗೆ ಬಾಳೆಹೊಳೆ ಗ್ರಾಮದಲ್ಲಿ ನಿರ್ಮಿಸಿದ್ದ ಸೇತುವೆಯ ಒಂದು ಭಾಗ ಕುಸಿದಿರುವುದರಿಂದ ಅದರ ದುರಸ್ತಿ ಕಾರ್ಯ ಕೈಗೊಳ್ಳುವ ಬಗ್ಗೆ.

ಶ್ರೀ ಬಿ.ಬಿ. ನಿಂಗಯ್ಯ (ಮೂಡಿಗೆರೆ):– ಮಾನ್ಯ ಅಧ್ಯಕ್ಷರೆ, ಮೂಡಿಗೆರೆ ತಾಲ್ಲೂಕಿನ ಕಳಸಾ ಹೋಬಳಿಯಲ್ಲಿ ಭದ್ರಾ ನದಿಗೆ ಬಾಳೆಹೊಳೆ ಗ್ರಾಮದಲ್ಲಿ ನಿರ್ಮಿಸಿದ್ದ ಸೇತುವೆಯ ಒಂದು ಭಾಗ ಕುಸಿದಿರುವುದರಿಂದ ಅದರ ದುರಸ್ತಿ ಕಾರ್ಯ ಕೈಗೊಳ್ಳುವ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳಯುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ,

ಮೂಡಿಗೆರೆ ತಾಲ್ಲೂಕು ಕಳಸ ಹೋಬಳಿಯಲ್ಲಿರುವ ಹಿರೇಬೈಲು ಬಾಳೆಹೊಳೆ ಜಿಲ್ಲಾ ಮುಖ್ಯ ರಸ್ತೆಯ ಕಿ.ಮೀ. 14.50 ರಲ್ಲಿ (ಬಾಳೆಹೊಳೆ ಸಮೀಪ) 100 ಮೀ. ಉದ್ದವಿರುವ ಸೇತುವೆಯನ್ನು 1999ರಲ್ಲಿ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ಉಪವಿಭಾಗ, ಮೂಡಿಗೆರೆ, ಇವರಿಂದ ನಿರ್ಮಿಸಲಾಗಿದ್ದು, 10 ಮೀ. ಉದ್ದದ 10 ಅಂಕಣಗಳಿರುತ್ತದೆ. ಸೇತುವೆಯು 5 ಮೀ. ಅಗಲವಿದ್ದು ಆರ್.ಸಿ.ಸಿ. ಡೆಕ್‌ಸ್ಲ್ಯಾಬ್ ಮತ್ತು ಆರ್.ಸಿ.ಸಿ. ಪಿಯರ್‌ಗಳನ್ನು ಹೊಂದಿರುತ್ತದೆ. ಈ ಸೇತುವೆಗೆ ವಿಂಗ್‌ವಾಲ್ ನಿರ್ಮಿಸಲಾಗಿರುವುದಿಲ್ಲವಾದ್ದರಿಂದ ದಿನಾಂಕ: 08–05–2014 ರಂದು ಸುರಿದ ಭಾರಿ ಮಳೆಯಿಂದ ಈ ಸೇತುವೆಯ ಹಿರೇಬೈಲು ಬದಿಯ ಅಪ್ರೋಚ್ ರಸ್ತೆ ಬದಿ ಕೊರೆದಿದ್ದು ಹೊಂಡ ನಿರ್ಮಾಣವಾಗಿರುತ್ತದೆ. ಸೇತುವೆ ಭದ್ರತೆಗೆ ಯಾವುದೇ ತೊಂದರೆ ಇರುವುದಿಲ್ಲ. ಆದ್ದರಿಂದ ಸದರಿ ಸೇತುವೆಯ